

ದಿನಮಣಿ ಬರುವ
ಮುಂಚೆ ನೆಲಕ್ಕೂ
ನಭಕ್ಕೂ ನೀಲಿ ಬೆಳಕೇ
ಸೇತುವೆ

# ಆಗುಂಬೆಯ ಮಂಜಿನ ಮುಂಜಾವು

**ಚಿತ್ರಪಟ ಕಥನ**

■ **ದಿನೇಶ್ ಹೆಗಡೆ, ಮಾನೀರ್**

ಮೆತ್ತಗೆ ಆವರಿಸಿಕೊಳ್ಳುವ ಮಂಜಿನಲ್ಲಿ ಪ್ರಶಾಂತವಾದ ಆಗುಂಬೆಯ ಬೀದಿಗಳು, ಲೈಟ್ ಪೋಲ್‌ಗಳು, ಕೊಡೆ ಹಿಡಿದು ನಡೆಯುವ ಆಕೃತಿಗಳು ಕರಗಿ ಮಾಯವಾದಂತೆ, ಬುಸ್ಸೆಂದು ಮುನ್ನುಗ್ಗುವ ಆಟೊ ರಿಕ್ಷಾಗಳು, ಗಾಡಿಗಳು ಮಂಜಿನಲ್ಲಿ ತೂರಿ ಹೋದಂತೆ ಕಾಣುತ್ತ ಒಮ್ಮೆಲೇ ನಾವು ಒಂಟಿಯಾದೆವೋ ಎಂದು ಭಾಸವಾಗಿಬಿಡುತ್ತದೆ. ಮತ್ತೆ ಮಂಜು ತೆಳುವಾದಂತೆ ಆಕೃತಿಗಳೆಲ್ಲ ಕಾಣತೊಡಗಿ ಮನದ ಮೂಲೆಯಲ್ಲಿ ಭರವಸೆಯ ಭಾವ. ಕೈಯಲ್ಲಿ ಕೊಡೆ ಇನ್ನೊಂದು ಕೈಯಲ್ಲಿ ಅಮ್ಮನ ಬೆಚ್ಚನೆ ಕೈಯನ್ನು ಹಿಡಿದ ಪುಟಾಣಿಯ ಆಕೃತಿಗಳು ನಮ್ಮನ್ನೆಲ್ಲೋ ಒಯ್ದು ಮಲಗಿದ ಬಾಲ್ಯದ ಕಥೆಗಳನ್ನು ಬಡಿದೆಬ್ಬಿಸುತ್ತವೆ. ಆಗ ಪಕ್ಕದಲ್ಲೇ ಭುಸ್ ಎಂದು ಸಾಗುವ ಗಾಡಿಯೊಂದರ ರಭಸಕ್ಕೆ ಪುಟಾಣಿಯ ಕೊಡೆ ಅದುರಿ ಅಮ್ಮನ ಸೆರಗನ್ನು ಹಾರಿಸುವಾಗ ಸ್ಥಿರ ಕಲಾಕೃತಿಯೊಂದು ತಟಕ್ಕನೆ ಜೀವ ತಳೆದು ಸಿನಿಮಾವೊಂದರ ದೃಶ್ಯವು ಮುಂದುವರೆದಂತೆ ಅನಿಸುತ್ತದೆ. ಅಷ್ಟರಲ್ಲೇ ಧೋ ಎಂದು ಸುರಿಯುವ ಮಳೆ ಮಂಜನ್ನೆಲ್ಲ ಕರಗಿಸಿ ನೀರಾಗಿಸಿ, ಮುಂದಿರುವ ಕಲಾಕೃತಿಗಳನ್ನು ನೈಜರೂಪಕ್ಕೆ ತರುತ್ತವೆ. ಮಳೆ ನಿಂತು ಮಂಜು ಕರಗಿ ಭಾವನೆಗಳು ನೈಜ ಜಗತ್ತಿಗೆ ಮರಳಿದ ಸ್ವಲ್ಪ ಹೊತ್ತಿಗೇ ಮತ್ತೆ ಮಂಜಿನ ಆವರಣ. ಮತ್ತೆ ಹೊಸ ಹೊಸ ಕಥೆಗಳ ಅನಾವರಣ.



